# ಸಂಸದರಿಗೆ ಕಲಾಪಕ್ಕೆ ಮುನ್ನ ವೈರಸ್ ಟೆಸ್ಟ್

## 72 ತಾಸು ಮೊದಲೇ ಪರೀಕ್ಷೆ

ನವದೆಹಲಿ: ಸೆಪ್ಟೆಂಬರ್ 14ರಿಂದ ಅಕ್ಟೋಬರ್ 1ರವರೆಗೆ ನಡೆಯುವ ನಿರೀಕ್ಷೆಯಲ್ಲಿರುವ ಸಂಸತ್ ಮುಂಗಾರು ಅಧಿವೇಶನಕ್ಕೆ ಮುಂಚೆ ಸಂಸದರಿಗೆ ಕೊರೋನಾ ಟೆಸ್ಟ್ ಮಾಡಿಸಿಕೊಳ್ಳುವಂತೆ ಸೂಚಿಸಲಾಗಿದೆ. 'ಅಧಿವೇಶನದ ಆರಂಭಕ್ಕೆ 72 ತಾಸು ಮುನ್ನ ಎಲ್ಲ ಸಂಸದರೂ ಕೊರೋನಾ ಪರೀಕ್ಷೆಗೆ ಒಳಗಾಗುವಂತೆ ಹೇಳಲಾಗುವುದು' ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಶುಕ್ರವಾರ ತಿಳಿಸಿದ್ದಾರೆ. ಸಂಸದರಷ್ಟೇ ಅಲ್ಲ, ಸಚಿವಾಲಯಗಳ ಎಲ್ಲ ಅಧಿಕಾರಿಗಳು, ಪತ್ರಕರ್ತರು, ಸಂಸತ್ತಿನ ಎಲ್ಲ ಸಿಬ್ಬಂದಿ ವರ್ಗ ಹಾಗೂ ಸಂಸತ್ ಆವರಣಕ್ಕೆ ಪ್ರವೇಶಿಸುವ ಎಲ್ಲರಿಗೂ ಅಧಿವೇಶನ ಆರಂಭಕ್ಕೆ ಮುನ್ನ ಕೊರೋನಾ ಪರೀಕ್ಷೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಯಾರ ಮೈಗೂ ಸ್ಪರ್ಶಿಸದಂತೆ ಭದ್ರತಾ ಪರೀಕ್ಷೆ ನಡೆಸಲಾಗುವುದು. ಅಧಿವೇಶನ ನಡೆಯುವ ಸಂದರ್ಭದಲ್ಲಿ ಅಗತ್ಯ ಬಿದ್ದರೆ 'ರ್ಯಾಂಡಮ್ ಚೆಕ್ಕಿಂಗ್' ಕೂಡ ಕೈಗೊಳ್ಳಲಾಗುವುದು ಎಂದೂ ಬಿರ್ಲಾ ಹೇಳಿದ್ದಾರೆ. ಅಧಿವೇಶನಕ್ಕೆ ತಯಾರಿ ಮಾಡುವ ಸಂಬಂಧ ಬಿರ್ಲಾ ಅವರು ಆರೋಗ್ಯ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿ ಜತೆ ಸಭೆ ನಡೆಸಿದರು.